ಸದಸ್ಯರ ಹೆಸರು	:	ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(357)122
ಉತ್ತರಿಸುವ ಸಚಿವರು	:	(ಶ್ರೀ ಗೂಳಿಹಟ್ಟಿ ಡಿ.ಶೇಖರ್) ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು

ಅ) ನಿವೇಶನ ರಹಿತ ಬಡ ನೇಕಾರ ಕುಟುಂಬಗಳಿಗೆ ನಿವೇಶನ ನೀಡಲು ಸರ್ಕಾರ ಯೋಚಿಸಿದೆಯೆ;

1. ನಿವೇಶನ ರಹಿತ ಬಡ ನೇಕಾರರಿಗೆ ಇಲಾಖೆಯ ಸಾಮಾನ್ಯ ಯೋಜನೆ ಕಾರ್ಯಕ್ರಮಗಳಡಿ ನಿವೇಶನ ನೀಡುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಆದಾಗ್ಯೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಚಾಲ್ತಿಯಲ್ಲಿರುವ ಬಡ ಕುಟುಂಬಗಳಿಗೆ ನಿವೇಶನ ನೀಡುವ ಯೋಜನೆಯಡಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗಳಿಂದ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಸ್ತಾವನೆ ಸಲ್ಲಿಸಿ ಬಡ ನೇಕಾರರ ಕುಟುಂಬಗಳಿಗೆ ನಿವೇಶನ ನೀಡಲಾಗುತ್ತದೆ.

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಸಹಾಯ ಪಡೆದು ನೇಕಾರರಿಗೆ ನಿವೇಶನ ನೀಡುವ ಯೋಜನೆಯನ್ನು 2005-06ನೇಸಾಲಿನಿಂದ ಜಾರಿಗೊಳಿಸಲಾಗುತ್ತಿದೆ

ಇ) ಹಾಗಿದ್ದಲ್ಲಿ, ಯಾವ ಅಳತೆಯ ನಿವೇಶನವನ್ನು ನೀಡಲು ಸರ್ಕಾರ ಆಲೋಚಿಸಿದೆ ಹಾಗೂ ನಿವೇಶನ ನೀಲಿನಕ್ಷೆ ಮತ್ತು ಪ್ರತಿ ನಿವೇಶನಕ್ಕೆ ತಗಲುವ ವೆಚ್ಚವೆಷ್ಟು;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ನಿಯಮದಂತೆ ಗ್ರಾಮೀಣ ಪ್ರದೇಶದಲ್ಲಿ 30'x40' ಹಾಗೂ ನಗರ ಪ್ರದೇಶದಲ್ಲಿ ಕನಿಷ್ಟ 25' x30' ಮತ್ತು ಗರಿಷ್ಟ 33'x30' ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಪ್ರತಿ ಎಕರೆಗೆ ಗ್ರಾಮೀಣ ಪ್ರದೇಶಕ್ಕೆ ರೂ.50,000/- ಮತ್ತು ನಗರ ಪ್ರದೇಶಕ್ಕೆ ರೂ.1.00 ಲಕ್ಷ ಅನುದಾನವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಮಂಜೂರಾಗುತ್ತಿದ್ದು, ಹೆಚ್ಚಿನ ಮೊತ್ತವನ್ನು ಫಲಾನುಭವಿಗಳಿಂದ ಪಡೆದು ಪ್ರತಿ ಎಕರೆಗೆ 22 ರಿಂದ 25 ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾಗುತ್ತಿದೆ. ಅಂದಾಜು ಪ್ರತಿ ನಿವೇಶನಕ್ಕೆ ಗ್ರಾಮೀಣ ಪ್ರದೇಶದಲ್ಲಿ ರೂ.6,000/- ಹಾಗೂ ನಗರ ಪ್ರದೇಶದಲ್ಲಿ ರೂ.10,000/- ವೆಚ್ಚ ತಗಲುತ್ತದೆ.

ಈ) ಪ್ರಸಕ್ತ ವರ್ಷದಲ್ಲಿ ಸರ್ಕಾರ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಿದೆ?

ಪ್ರಸಕ್ತ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಾಯದಿಂದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಕೆಳಕಂಡಂತೆ 287 ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಲಾಗಿದೆ.

ಕ್ರ.ಸಂ.	ತಾಲ್ಲೂಕು	ನಿವೇಶನಗಳ ಸಂಖ್ಯೆ.
1.	ಬದಾಮಿ	115
2	ಹುನಗುಂದ	50
3	ಬೀಳಗಿ	56
4	ಜಮಖಂಡಿ	66
	ಒಟ್ಟು	**287**

ವಿಷಯ: ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕದ ಸ್ಥಾಪನೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (361)124

2. ಸದಸ್ಯರ ಹೆಸರು : ಶ್ರೀ ಅಪ್ಪಾ ಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ)

3. ಉತ್ತರಿಸುವ ಸಚಿವರು : (ಶ್ರೀ ಮುರುಗೇಶ್ ಆರ್.ನಿರಾಣಿ)
: ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ. ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳಿವೆ.

ರಾಜ್ಯದ ಎಲ್ಲಾ ಜೆಲ್ಲೆಗಳಲ್ಲೂ ಸಹ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿದ ಆಹಾರ ಸಂಸ್ಕರಣಾ ಘಟಕಗಳು ಸ್ಥಾಪನೆಯಾಗಿರುತ್ತವೆ. ಇಂತಹ ಘಟಕಗಳು ಹೆಚ್ಚಾಗಿ ಬೆಂಗಳೂರು(ನಗರ), ಬೆಂಗಳೂರು(ಗ್ರಾಮಾಂತರ), ಮೈಸೂರು, ದಕ್ಷಿಣಕನ್ನಡ, ಕೋಲಾರ, ಬೆಳಗಾಂ, ಬಿಜಾಪುರ, ಹುಬ್ಬಳ್ಳಿ ಧಾರವಾಡ, ಶಿವಮೊಗ್ಗ, ಉತ್ತರ ಕನ್ನಡ, ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ, ಹಾವೇರಿ, ಮತ್ತು ತುಮಕೂರು ಜಿಲ್ಲೆಗಳಲ್ಲೂ ಹೆಚ್ಚಾಗಿ ಇರುತ್ತವೆ.

ಆ. ಬಿಜಾಪುರ ಜಿಲ್ಲೆಯ ಆಹಾರಧಾನ್ಯಗಳನ್ನು ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಮುಂಚೂಣಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;